
ಸಾಧ್ಯವಿದೆ. ಹಾಗಾಗಿ ಪ್ರಜ್ಞೆಯ ಮೂಲಕವೇ ನಾವು ಪ್ರಜ್ಞೆಯ ಔಚಿತ್ಯವನ್ನೂ, ಪ್ರಭಾವವನ್ನು ಅರಿಯಲು ಸಾಧ್ಯವಾಗಿದೆ ಎನ್ನಬಹುದು. ಒಂದು ರೀತಿಯಲ್ಲಿ 'ಪ್ರಜ್ಞೆ'ಗೆ 'ಪ್ರಜ್ಞೆ'ಯನ್ನೇ ಅರಿಯುವ ಶಕ್ತಿ ಇದೆ. ಹಾಗೆಂದೇ ಈ 'ಪ್ರಜ್ಞೆ'ಯನ್ನು ತನ್ನನ್ನು ತಾನೇ ಅರಿಯುವ ಶಕ್ತಿಯುಳ್ಳ ಜೀವ ಜಗತ್ತಿನ ಮೊದಲ ಅದ್ಭುತ ಎಂದು ಪರಿಗಣಿಸಬಹುದು. ಆದರೆ ಇದಕ್ಕೆ ವೈರುಧ್ಯ ಎನ್ನುವಂತೆ ಈ 'ಪ್ರಜ್ಞೆ'ಯ ಸಂಪೂರ್ಣ ರೂಪ ಮತ್ತು ಸವಿವರವಾದ ಪರಿಚಯ ನಮಗಿನ್ನೂ ದೊರಕೇ ಇಲ್ಲ!




## 'ಪ್ರಜ್ಞೆ': ಸತ್ಯವೋ? ಭ್ರಮೆಯೋ?


ಮಾನವನ 'ಪ್ರಜ್ಞೆ' ಇನ್ನೂ ತನ್ನನ್ನು ತಾನು ಅರಿಯುವತ್ತ ಪ್ರಯತ್ನಿಸುತ್ತಲೇ ಇದೆ. ಪ್ರಜ್ಞೆ ಎಂದರೆ ಏನು, ಯಾವುದು, ಅದು ಎಲ್ಲಿದೆ ಎಂಬ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳು ಇನ್ನೂ ಮರೀಚಿಕೆಯೇ ಆಗಿ ಉಳಿದಿವೆ ಎನ್ನಬಹುದು[1]. 'ಪ್ರಜ್ಞೆ' ಎನ್ನುವುದು ನಮ್ಮ ಅನುಭವಕ್ಕೆ ಸಿಕ್ಕಿದೆ ಎನ್ನುವುದು ಮಾತ್ರವೇ ಇದುವರೆಗೆ ದೃಢಪಟ್ಟಿರುವ ಏಕೈಕ ಸತ್ಯ. ಆ ಅನುಭವದ ಮೂಲಕ ನಮಗೇ ನಾವೇ ಸೂಚಿಸಿಕೊಳ್ಳುತ್ತಿರುವ ಆ 'ಪ್ರಜ್ಞೆ'ಯ ಪರಿಕಲ್ಪನೆಯು ಕೇವಲ ನಮ್ಮ ಗ್ರಹಿಕೆ ಮಾತ್ರವೇ ಆಗಿರದೆ ಅದಕ್ಕೆ ತಾನಾಗಿಯೇ ವ್ಯಕ್ತಗೊಳ್ಳಬಲ್ಲ ಒಂದು ಅಸ್ಮಿತೆ ಇದೆ ಎಂದು ಸಾಧಾರವಾಗಿ ತೋರಿಸಿಕೊಡಲು ಸಾಧ್ಯವಾಗಿಲ್ಲ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ನಾವು ನಿದ್ದೆಯಲ್ಲಿ ಕಾಣುವ 'ಕನಸು' ಒಂದು ಅನುಭವ ಮಾತ್ರವೇ ಹೊರತು, ಅಲ್ಲಿ ನಡೆದ ಘಟನೆಗಳು ಸತ್ಯವಾಗಲು ಹೇಗೆ ಸಾಧ್ಯವಿಲ್ಲವೋ, ಹಾಗೆ ಪ್ರಜ್ಞೆ ಕೇವಲ ನಮ್ಮ ಅನುಭವಕ್ಕೆ ಸಿಕ್ಕ ಭ್ರಮಾಸ್ಥಿತಿ ಮಾತ್ರವೇ ಆಗಿದ್ದು, ಅದಕ್ಕೆ ಒಂದು ಸತ್ಯವಾದ ಅಸ್ತಿತ್ವ ಇದೆಯೇ ಎನ್ನುವುದು ಇನ್ನೂ ಅರ್ಥವಾಗದ ಸವಾಲು.

ಇನ್ನೂ ವಿಚಿತ್ರವೆಂದರೆ ಪ್ರಜ್ಞೆಯ ಬಗೆಗಿನ ಈ ಎಲ್ಲ ಸಾಧ್ಯತೆಗಳೂ ನಮಗೆ 'ಅನಿಸಿರುವುದು' ನಮ್ಮಲ್ಲಿರುವ ಆ ಪ್ರಜ್ಞೆ ತನ್ನ ಬಗ್ಗೆ ತಾನೇ ತೋರುವ ಕುತೂಹಲದಿಂದ. ಆ ಕುತೂಹಲ ಮೂಡುವುದು 'ನಮ್ಮಲ್ಲಿ'ಯೇ ಆದರೂ ಅದು ಮೂಡಿರುವುದು ಪ್ರಜ್ಞೆಯಿಂದಾಗಿ. ಅಂದರೆ ಪ್ರಜ್ಞೆ ತನ್ನನ್ನು ತಾನೇ ಅರಿಯಲು ಆಸಕ್ತಿ ಮತ್ತು ಉತ್ಸಾಹ ವ್ಯಕ್ತಪಡಿಸುತ್ತಲೇ ಇದೆ. ಅದು ಎಂದಿಗೆ ತನ್ನ ಸತ್ಯ ಮತ್ತು ಸಂಪೂರ್ಣ ರೂಪವನ್ನು ಹುಡುಕಿಕೊಳ್ಳಬಲ್ಲದು ಎನ್ನುವುದೂ ಖಾತ್ರಿಯಿಲ್ಲ. ಅದರ ಸ್ವರೂಪವನ್ನು ಅರಿಯುವ ನಿಟ್ಟಿನಲ್ಲಿ ಮಾನವ ವೈಜ್ಞಾನಿಕ ಸಮೀಕ್ಷೆಗಳನ್ನು, ಪ್ರಯೋಗಗಳನ್ನೂ, ಚರ್ಚೆಗಳನ್ನೂ ಹುಟ್ಟುಹಾಕುತ್ತಲೇ ಇದ್ದಾನೆ. ಅಥವಾ, ಆ ಪ್ರಜ್ಞೆಯೇ ಅದೆಲ್ಲವನ್ನೂ ಹುಟ್ಟುಹಾಕುತ್ತಿದೆ ಎಂದರೂ ಸರಿಯೆ.

ಪ್ರಜ್ಞೆಯ ಬಗ್ಗೆ ನಾವು ಅರಿತಿರುವುದಕ್ಕಿಂತ ನಮಗಿರುವ ಪ್ರಶ್ನೆಗಳೆ ಹೆಚ್ಚು. ಉದಾಹರಣೆಗೆ, ಈ ಪ್ರಜ್ಞೆ ಹೇಗೆ ತಾನೆ ನಮ್ಮ ಮನೋನಕ್ಷೆಯಲ್ಲಿ ಮೂಡುತ್ತದೆ? ತಾನಾಗಿ ಅದು ಮೂಡುತ್ತದೆಯೋ ಅಥವಾ, ನಮ್ಮ ಮನಸ್ಸಿನ ಆಹ್ವಾನಕ್ಕೆ ಸ್ಪಂದಿಸಿ ರೂಪುಗೊಳ್ಳುತ್ತದೆಯೋ? ಅಥವಾ ಅದಕ್ಕೆ ನಮ್ಮ ಮನಸ್ಸಿನಿಂದ ಸ್ವತಂತ್ರವಾದ ಅಸ್ತಿತ್ವ ಇದೆಯೇ? ಅದು ನಮ್ಮ ಮನೋನಕ್ಷೆಯಲ್ಲಿ ಮೂಡುವಾಗ ಮೆದುಳಿನಲ್ಲಿ ಎಂತಹ ರಾಸಾಯನಿಕ ಕ್ರಿಯೆಗಳು ನಡೆಯುತ್ತವೆ? ಅವು ಕೇವಲ ಮೆದುಳಿನಲ್ಲಿ ನಡೆಯುವ ರಾಸಾಯನಿಕ ಕ್ರಿಯೆಗಳೇ ಆಗಿದ್ದಲ್ಲಿ, ನರಮಂಡಲ ಇರುವ ಎಲ್ಲ ಪ್ರಾಣಿಗಳಲ್ಲೂ ಪ್ರಜ್ಞೆ ವ್ಯಕ್ತಗೊಳ್ಳಲು ಸಾಧ್ಯವೆ? ಅಂದರೆ, ಪ್ರಜ್ಞೆ ಮಾನವನಿಗೆ ಮಾತ್ರವೇ ಸೀಮಿತವಾಗಿರದೆ ಇತರೆ ಪ್ರಾಣಿಗಳಲ್ಲೂ ಇದೆಯೆ? ಇದ್ದಲ್ಲಿ ಆ ಪ್ರಜ್ಞಾಸ್ಥಿತಿಗಳು ಮಾನವನ ಪ್ರಜ್ಞೆಗಿಂತ ವಿಭಿನ್ನವೆ? ಮಾನವ ಪ್ರಭೇದ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಅವನಿಗೆ ಪ್ರಜ್ಞೆಯ ಪರಿಚಯ ಇದೆಯೇ? ಹಾಗಿದ್ದರೆ ಮಾನವನ ಮೂಲ ಪ್ರಭೇದಗಳಲ್ಲಿಯೂ ಈ ಪ್ರಜ್ಞೆ ಮೂಡುತ್ತದೆಯೇ? ಹೀಗೆ, ನೂರಾರು, ಸಾವಿರಾರು ಪ್ರಶ್ನೆಗಳಿಗೆ ಇನ್ನೂ ಸಮಂಜಸ ಉತ್ತರಗಳು ದೊರಕಿಲ್ಲ.

## 'ಪ್ರಜ್ಞೆ' ನೆಲೆ-ಎಲ್ಲಿ ಮತ್ತು ಹೇಗೆ?

ಇಪ್ಪತ್ತನೇ ಶತಮಾನದ ಅತ್ಯಂತ ಪ್ರಮುಖ ಆವಿಷ್ಕಾರ ಎಂದು ಪರಿಗಣಿಸಲಾಗಿರುವ, ನಮ್ಮ ಅನುವಂಶಿಕ ಧಾತುಗಳಿಗೆ ರಾಸಾಯನಿಕ ಆಧಾರವಾಗಿರುವ **DNA**ನ ರಚನೆಯನ್ನು ಭೇದಿಸಿದ, ನೊಬೆಲ್ ಪ್ರಶಸ್ತಿ ವಿಜೇತ, ಫ್ರಾನ್ಸಿಸ್ ಕ್ರಿಕ್ ಅವರು, ಆ ಶತಮಾನದ ಅಂತ್ಯದಲ್ಲಿ, ಅಂದರೆ 1998ರಲ್ಲಿ, (ತಮ್ಮ 82ನೇ ವಯಸ್ಸಿನಲ್ಲಿ) ತಮ್ಮ ಮುಂದಿನ ಇಡೀ ಜೀವನವನ್ನು ಈ ಪ್ರಜ್ಞೆಯನ್ನು ಭೇದಿಸಲು ಮುಡಿಪಾಗಿಡಲು ತೀರ್ಮಾನಿಸಿ, ಮುಂದಿನ 25 ವರ್ಷಗಳಲ್ಲಿ, ಅಂದರೆ 2023ರೊಳಗೆ ಅದನ್ನು ಸಾಧ್ಯವಾಗಿಸುತ್ತೇನೆ ಎಂದು ಘೋಷಿಸಿ ಅದರಲ್ಲಿ ತಮ್ಮನ್ನು ಇಡಿಯಾಗಿ ತೊಡಗಿಸಿಕೊಂಡರು[2]. ಕೋಚ್ ಎನ್ನುವವರ ಜೊತೆಗೂಡಿ ಶೋಧ ಪ್ರಾರಂಭಿಸಿದರು ಕೂಡ. ಆದರೆ, ಅವರ ಆ ಪ್ರಯತ್ನ ಇನ್ನೂ ಕೈಗೂಡಿಲ್ಲ[3]. 2023 ಬಂದರೂ ಪ್ರಜ್ಞೆ ಇನ್ನೂ ಯಾರ ಕೈಗೂ ಸಿಕ್ಕಿಲ್ಲ! ಆದರೂ ಪರೋಕ್ಷವಾಗಿ ದೊರೆತಿರುವ ಕೆಲವು ವಿವರಗಳು ಇಲ್ಲಿ ಪ್ರಸ್ತುತ. ಅದರಲ್ಲೂ ಎರಡು ರೀತಿಯ ವಿವರಗಳು ಇಂದು ವೇದ್ಯವಾಗಿವೆ ಎನ್ನಬಹುದು:




**1. ಪ್ರಜ್ಞೆಯ ನೆಲೆ:** ಪ್ರಜ್ಞೆಯು ನಮ್ಮ ಮೆದುಳಿನ ಯಾವ ಭಾಗದಲ್ಲಿ ಮೂಡುತ್ತದೆ ಎನ್ನುವುದನ್ನು ಅರಿಯಲು ವಿಜ್ಞಾನಿಗಳು 'ಅವಕಾಶ ವ್ಯವಕಲನ' **(Opportunistic deduction)** ವಿಧಾನವನ್ನು ಅನುಸರಿಸಿ ಅರಿತಿದ್ದಾರೆ. ಉದಾಹರಣೆಗೆ, ನಮ್ಮ ಮೆದುಳಿನ ಮೂರು ಪ್ರಮುಖ ಭಾಗಗಳಾದ **Cortex, Cerebellum** ಮತ್ತು **Spinal Chord**ಗಳಲ್ಲಿ ಯಾವುದೇ ಭಾಗವನ್ನು ಆಕಸ್ಮಿಕವಾಗಿ ಕಳೆದುಕೊಂಡ ವ್ಯಕ್ತಿ ಅಥವಾ ರೋಗಿಯನ್ನು ವಿವಿಧ ಸ್ಪಂದನಗಳಿಗೆ ಒಳಪಡಿಸಿ ಅವರಲ್ಲಿ 'ಪ್ರಜ್ಞೆ' ಮೂಡುತ್ತದೆಯೇ ಎಂದು ಪರಿಶೀಲಿಸಲಾಗಿದೆ. ಅದರಂತೆ **Cerebellum** ಮತ್ತು **Spinal Chord** ಇಲ್ಲದ ವ್ಯಕ್ತಿಗಳಲ್ಲಿ ಇತರೆ ತೊಂದರೆಗಳು ಕಂಡಿದ್ದರೂ, ಅವರಲ್ಲಿ ಪ್ರಜ್ಞೆ ಮೂಡಲು ಯಾವುದೇ ತೊಂದರೆ ಇಲ್ಲ. ಕೋಟ್ಯಂತರ ನರಕೋಶಗಳನ್ನು ಹೊಂದಿರುವ ಈ ಎರಡೂ ಭಾಗಗಳಿಗೂ 'ಪ್ರಜ್ಞೆ' ಮೂಡುವ ಕ್ರಿಯೆಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸಾಬೀತಾಗಿದೆ. ಆದರೆ ನಮ್ಮ ಮೆದುಳಿನ ಮುಖ್ಯ ಭಾಗವಾದ **Cortex**ನ ಕೆಲವು ಪ್ರಮುಖ ಭಾಗಗಳು, ಅದರಲ್ಲೂ ಕಾರ್ಟೆಕ್ಸ್‌ನ ಹಿಂಬದಿಯಲ್ಲಿರುವ **Posterior Cortex** ಭಾಗವು ನಮ್ಮೆಲ್ಲ ಅನುಭವಗಳಿಗೂ ಕೊಂಡಿಯಷ್ಟೇ ಆಗಿರದೆ, ವ್ಯಕ್ತಿ ಪ್ರಜ್ಞಾತೀತನಾಗಿರಲು ಸಹಕಾರಿಯಾಗಿದೆ ಎಂದು ತೋರಿಸಿದ್ದಾರೆ.

**2. ಸ್ವ–ಅಸ್ತಿತ್ವ ಮತ್ತು ಪ್ರಜ್ಞೆ:** ರೋಮ್‌ನ ಪೌರಾಣಿಕ ಕಥೆಗಳಲ್ಲಿ, 'ಸ್ವ–ಅಸ್ತಿತ್ವ'ವನ್ನು ಅರಿಯದ ಮನಸ್ಸು ತನಗೆ ತಾನೇ ಎಂತಹ ದುರಂತ ತಂದುಕೊಳ್ಳಬಲ್ಲದು ಎಂದು ಬಿಂಬಿಸುವ ಒಂದು ಘಟನೆ ಇದೆ. ನಾರ್ಸಿಸಸ್ ಎಂಬ ಸುಂದರ ಯುವಕ ತನ್ನನ್ನು ಪ್ರೀತಿಸಿದ್ದ ಸುಂದರ ಯುವತಿ ಎಕೋ(**Echo**;ಪ್ರತಿಧ್ವನಿ)ಳನ್ನು ತಿರಸ್ಕರಿಸಿದ ಕಾರಣ, ಆಕೆಯ ಕೋಪದ ಫಲವಾಗಿ ನೆಮೆಸಿಸ್ ದೇವತೆಯ ಶಾಪಕ್ಕೆ ಬಲಿಯಾಗುತ್ತಾನೆ.

---

1. Anil Seth, 2021, Being You – A new science of consciousness. Faber / Dutton.
Anil Seth, Consciousness: How your brain creates the feeling of being. www.newscientist.com/definition/consciousness/
2. Jason Arunn Murugesu, 2022, Will 2023 be the year we finally understand consciousness? | New Scientist, Dec, 28, 2022
3. ಫ್ರಾನ್ಸಿಸ್ ಕ್ರಿಕ್ 2004ರಲ್ಲಿಯೇ ತೀರಿಕೊಂಡರು.